ಕಾರಣವಾಗಬಲ್ಲವು. ಇದೊಂದು ಸೋಜಿಗವೆನಿಸಿದರೂ ದಿಟ. ಸುಖಕ್ಕೆ ಕಾರಣವಾಗಬಲ್ಲ ವಸ್ತುವೊಂದು ನಮ್ಮ ಸನಿಹದಲ್ಲಿದ್ದಾಗ ಅದು 'ಸುಖ'ವನ್ನು ಕೊಡುತ್ತಿರುತ್ತದೆ. ಅದು ನಮ್ಮ ಕೈ ತಪ್ಪಿಹೋದಾಗ ಅಥವಾ ಕೈ ತಪ್ಪಿಹೋದೀತೆಂಬ ಯೋಚನೆಯೇ, ನಮ್ಮ ದುಃಖಕ್ಕೆ ಕಾರಣವಾಗಬಲ್ಲದು. ದುಡ್ಡು ನಮ್ಮ ಕೈ ಸೇರಿದಂತೆಲ್ಲ ನಮ್ಮಲ್ಲಿ ಸಂತೋಷವೂ ಹೆಚ್ಚುತ್ತಲೇ ಹೋಗುವುದು ಸಹಜವಷ್ಟೆ. ಆದರೆ ಆ ದುಡ್ಡು ಖರ್ಚಾಗುತ್ತಹೋದಂತೆ ದುಃಖ ನಮ್ಮನ್ನು ಹಿಂಬಾಲಿಸತೊಡಗುತ್ತದೆ; ಕಳುವಾಯಿತೆಂದು ಇಟ್ಟುಕೊಳ್ಳಿ – ಒಮ್ಮೆಲೇ ದುಃಖ ಎರಗುತ್ತದೆ. ಎಂದರೆ, ನಮಗೆ ಯಾವುದರಿಂದ ಸುಖ ಸಿಗುತ್ತದೆಯೆಂದು ನಾವು ಭಾವಿಸಿರುತ್ತೇವೆಯೋ ಅದೇ ನಮ್ಮ ದುಃಖಕ್ಕೂ ಕಾರಣವಾಗುತ್ತಿದೆ. ಹಾಗಾದರೆ ಸುಖದ ಮೂಲ ಯಾವುದು? ಅದು ಎಲ್ಲಿದೆ? ಇದನ್ನು ನಾವು ಹುಡುಕಬೇಕಾಗುತ್ತದೆ. ಇದೇ ದಿಟವಾದ ಸತ್ಯಾನ್ವೇಷಣೆ ಎನಿಸಿಕೊಳ್ಳುತ್ತದೆ. ಈ ಝೆನ್‌ಕತೆ ನಮ್ಮನ್ನು ಇಂಥದೊಂದು ಅನ್ವೇಷಣೆಯ ಬಗ್ಗೆ ಯೋಚಿಸುವಂತೆ ಮಾಡುತ್ತಿದೆ.

ಸುಖ ಎನ್ನುವುದು ನಾವು ಬಯಸುತ್ತಿರುವ ವಸ್ತುವಿನಲ್ಲೋ ಅಥವಾ ನಮ್ಮಲ್ಲಿ ಇರುವ ವಸ್ತುವಿನಲ್ಲೋ ಇರುವುದಾದರೆ ಆ ವಸ್ತುವಿನ ಸಾಮೀಪ್ಯವೇ ಸುಖವನ್ನು ಕೊಡುವಂತಿರಬೇಕು. ಆದರೆ ನಾವು ಸುಖವೆಂದು ಭಾವಿಸಿರುವ ವಸ್ತುವಿನ ಆಲಿಂಗನದಲ್ಲಿಯೇ ನಾವಿದ್ದಾಗಲೂ ನಮಗೆ ದುಃಖ ಕಾಡಬಹುದು; ಆ ಸುಖವಸ್ತು ನಮ್ಮ ಕೈ ಬಿಟ್ಟೀತೆಂಬ ಭಯ, ಸಂದೇಹಗಳೇ ನಮ್ಮ ದುಃಖಕ್ಕೆ ಕಾರಣವಸ್ತುವಾಗಬಹುದು. ಎಂದರೆ, ಸುಖ – ಎನ್ನುವುದು 'ಆ' ವಸ್ತುವಿನಲ್ಲಿ ಇಲ್ಲ ಎನ್ನುವುದು ಸಿದ್ಧವಾಯಿತು. ಹಾಗಾದರೆ ಸುಖದ ಮೂಲ ಎಲ್ಲಿದೆ?

